(ಅ) 30,329

(ಇ) ಹೌದು ಬಂದಿದೆ.

(ಈ) ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಕಡಬಗೆರೆ ಗ್ರಾಮಾಂತರ ಹಸಿರು ಪಡಿತರ ಚೀಟಿಯ ವಿತರಣೆಯಲ್ಲಿ ಕಂಡುಬಂದ ಲೋಪದೋಷಗಳಿಗಾಗಿ ಆಹಾರ ಶಿರಸ್ತೇದಾರರನ್ನು ವಿಚಾರಣೆ ಕಾಯ್ದಿರಿಸಿ ಅಮಾನತ್ತು ಪಡಿಸಲಾಗಿತ್ತು. ಅನರ್ಹರು ಹೊಂದಿರುವ ಹಸಿರು ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ಹಾಗೂ ಹಾಲಿ ವಿತರಿಸಿರುವ ಹಸಿರು ಕಾರ್ಡಿನ ವಿತರಣೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸುವ ಉದ್ದೇಶದಿಂದ ರಾಜ್ಯದಲ್ಲಿ ವಿತರಿಸಿರುವ ಪಡಿತರ ಚೀಟಿಗಳನ್ನು ಹಂತ ಹಂತವಾಗಿ ಸಂಪೂರ್ಣ ಗಣಕೀರಣಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಎಫ್‌ಸಿಎಸ್ 275 ಡಿಆರ್‌ಎ 99 ದಿನಾಂಕ 10-12-99 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಈ ಕಾರ್ಯವನ್ನು ಪ್ರಾಯೋಗಿಕವಾಗಿ ಬೆಂಗಳೂರು (ಅ.ಪ.) ಪ್ರದೇಶ ಮತ್ತು ಬೆಳಗಾವಿ ಜಿಲ್ಲೆಯ ಬೈಲುಹೊಂಗಲ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲು ಉದ್ದೇಶಿಸಿದ್ದು ಈ ಯೋಜನೆಯಲ್ಲಿ ಅನರ್ಹರು ಹೊಂದಿರುವ ಹಸಿರು ಪಡಿತರ ಚೀಟಿಗಳನ್ನು ತೊಡೆದು ಹಾಕುವುದಲ್ಲದೆ, ಲೋಪದೋಷಗಳನ್ನು ಸಹ ಸರಿಪಡಿಸಲು ಉದ್ದೇಶಿಸಿದೆ.

(ಉ) ಹಸಿರು ಪಡಿತರ ಚೀಟಿ ಪಡೆದಿಲ್ಲದ ಬಡವರ ಸಂಖ್ಯೆ ಬಗ್ಗೆ ಇಲಾಖೆ ಸಮೀಕ್ಷೆ ಕೈಗೊಂಡಿಲ್ಲ. ಆದರೆ ಪಡಿತರ ಚೀಟಿಯ ವಿತರಣೆಯನ್ನು ಪರಿಣಾಮಕಾರಿಯನ್ನಾಗಿ ಜಾರಿಗೊಳಿಸುವ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ: ಎಫ್‌ಸಿಎಸ್ 06 ಡಿಆರ್‌ಎ 2000 ದಿನಾಂಕ: 1-2-2000 ದಲ್ಲಿ ಸರಳೀಕೃತ ಹಾಗೂ ವಿಕೇಂದ್ರಿತ ಆದೇಶ ಹೊರಡಿಸಿದೆ. ಈ ಆದೇಶಗಳಂತೆ ಹಸಿರು ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸುವವರು ನಿಗಧಿತ ಅರ್ಜಿಯೊಂದಿಗೆ ಆದಾಯ ಪ್ರಮಾಣ ಪತ್ರ ಹಾಗೂ ವಾಸದ ಬಗ್ಗೆ ಆಧಾರ ಪತ್ರ ಒದಗಿಸಬೇಕಿರುತ್ತದೆ. ಈ ಅರ್ಜಿಗಳನ್ನು ಪರಿಶೀಲಿಸಿ ಅರ್ಹತೆಯ ಆಧಾರದ ಮೇಲೆ ಸಂಬಂಧಿಸಿದ ಆಹಾರ ನಿರೀಕ್ಷಕರೇ 30 ದಿನಗಳೊಳಗಾಗಿ ಪಡಿತರ ಚೀಟಿ ನೀಡಲು ಅಧಿಕಾರ ನೀಡಿದೆ. ನೆಲಮಂಗಲ ವಿಧಾನ ಸಭಾ ಕ್ಷೇತ್ರದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮೂರು ಹೋಬಳಿಯಿಂದ ಹಸಿರು ಪಡಿತರ ಚೀಟಿಗಾಗಿ ಒಟ್ಟು 676 ಅರ್ಜಿಗಳು ಬಾಕಿ ಇರುತ್ತದೆ. ನಗರ ಜಿಲ್ಲೆಯ ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯಲ್ಲಿ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ.

ಬೃಂದಾವನ ಮಿ ಹೈಡಲ್ ಪ್ರಾಜೆಕ್ಟ್

1776 (2181) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೃಂದಾವನ ಮಿ ಹೈಡಲ್ ಕೆ.ಪಿ.ಸಿ.ಗೆ ಮಂಜೂರಾಗಿದ್ದು, ಇದರ ಕಾಮಕಾರಿಗಾಗಿ ಕೆ.ಪಿ.ಸಿ.ಗೆ ಓ.ಇ.ಸಿ.ಎಫ್. ಜಪಾನ್ ಹಾಗೂ ಆರ್.ಇ.ಸಿ. ದೆಹಲಿ ಇಲ್ಲಿಂದ ಸಾಲ ಮಂಜೂರಾಗಿದ್ದು ನಿಜವೇ;

(ಅ) ಈ ಬಗ್ಗೆ ಕೆ.ಪಿ.ಸಿ. ಟೆಂಡರ್ ಕರೆದಿರುವುದು ನಿಜವೇ? ಇದನ್ನು ಏಟ್ರಿಯಾ ಪವರ್ ಸಂಸ್ಥೆಯವರಿಗೆ ನೀಡಲಾಗಿದ್ದು ನಿಜವೇ? ನೀಡಿದ ದಿನಾಂಕ ಯಾವುದು ;

(ಇ) ಕೆ.ಪಿ.ಸಿ.ಗೆ ಮಂಜೂರಾತಿ ರದ್ದು ಪಡಿಸಿದ ದಿನಾಂಕ ಯಾವುದು? ಈ ರೀತಿ ರದ್ದುಪಡಿಸಲು ಕಾರಣವೇನು?

ಶೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು)

(ಅ) ನಿಜ. 1991-92ರ ಕೆ.ಪಿ.ಸಿ. ದರ ಪಟ್ಟಿಯಂತೆ 24,06 ಕೋಟಿ ರೂ. ಎಂದು ಅಂದಾಜು ಮಾಡಲಾಗಿದ್ದ ಕೆಲಸಕ್ಕೆ ಓ.ಇ.ಸಿ.ಎಫ್. ಜಪಾನ್ ಇವರು ಆರ್.ಇ.ಸಿ. ದೆಹಲಿ ಇವರ ಮುಖಾಂತರ 24,06 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದರು. ಹಾಗೂ ಇದರ ಮೊದಲ ಕಂತನ್ನಾಗಿ 1.29 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದರು. ಆದರೆ, ತಮಿಳುನಾಡು ಸರ್ಕಾರ, ಯೋಜನಾ ಆಯೋಗ ಮೂಲಕ ಕಾವೇರಿ ನೀರು ವ್ಯಾಜ್ಯ ನ್ಯಾಯ ಮಂಡಲಿ ಮುಂದೆ ಇರುವುದರಿಂದ ಕೇಂದ್ರ ಸರ್ಕಾರಕ್ಕೆ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಹಾಗಾಗಿ ಕರ್ನಾಟಕ ಸರ್ಕಾರ ಕಂಡಿಕೆವಾರು ಉತ್ತರವನ್ನು ನೀಡಿತ್ತು ಹಾಗೂ ಕೆ.ಪಿ.ಸಿ, ಓ.ಇ.ಸಿ.ಎಫ್, ಆರ್.ಇ.ಸಿ. ಇವರಿಂದ ಪಡೆದ 1.29 ಕೋಟಿ ರೂ.ಗಳನ್ನು ಹಿಂದಿರುಗಿಸಿತು.

(ಆ) ಕೆ.ಪಿ.ಸಿ. ಟೆಂಡರ್ ಕರೆದಿದ್ದು ನಿಜ. ಸರ್ಕಾರದ ಆದೇಶದ ಮೇರೆಗೆ ಕೆ.ಪಿ.ಸಿ. ಅಕ್ಟೋಬರ್ 1998ರಲ್ಲಿ ಸಿವಿಲ್ ಹಾಗೂ ಎಲೆಕ್ಟ್ರೋಮೆಕಾನಿಕಲ್ ಕೆಲಸಕ್ಕೆ ಟೆಂಡರ್‌ನ್ನು ಕರೆದಿತ್ತು. ಈ ಯೋಜನೆಯನ್ನು ಮೆ: ಏಟ್ರಿಯಾ ಪವರ್ ಸಂಸ್ಥೆಗೆ ನೀಡಿದ್ದೂ ನಿಜ. ಸರ್ಕಾರದ ಆದೇಶದ ಸಂಖ್ಯೆ: ಡಿಇ 54 ಎನ್‌ಸಿಇ 99 (8) ದಿನಾಂಕ 9-7-99 ರಂದು ಏಟ್ರಿಯಾ ಪವರ್ ಸಂಸ್ಥೆಗೆ ನೀಡಿದೆ.

(ಇ) ಸರ್ಕಾರದ ಆದೇಶ ಸಂಖ್ಯೆ: ಡಿಇ 54 ಎನ್‌ಸಿಇ 99 (8) ದಿನಾಂಕ 9-7-99ರಲ್ಲಿ ಈ ಯೋಜನೆಯನ್ನು ಏಟ್ರಿಯಾ ಪವರ್ ಸಂಸ್ಥೆಗೆ ಮರುಹಂಚಿಕೆ ಮಾಡಿದ ದಿನಾಂಕದಿಂದಲೇ ಕರ್ನಾಟಕ ವಿದ್ಯುತ್ ನಿಗಮಕ್ಕೆ ಹಂಚಿಕೆ ಮಾಡಲಾಗಿದ್ದ ಈ ಯೋಜನೆಯನ್ನು ರದ್ದುಪಡಿಸಲಾಗಿದೆಯೆಂದು ಪರಿಭಾವಿಸಲಾಗಿದೆ. ಈ ಆದೇಶದಲ್ಲಿ ಏಟ್ರಿಯಾ ಸಂಸ್ಥೆಯವರು ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ಹಾಗೂ ಇದುವರೆವಿಗೂ ಕೆ.ಪಿ.ಸಿ.ಯವರು ಈ ಯೋಜನೆಗೆ ವೆಚ್ಚಮಾಡಿರುವ ಹಣವನ್ನು ಕೆ.ಪಿ.ಸಿ.ಗೆ ಹಿಂದಿರುಗಿಸಬೇಕೆಂದು ತಿಳಿಸಿರುತ್ತದೆ. ರಾಜ್ಯ ಸರ್ಕಾರದ ಕಾರ್ಯನೀತಿಯಂತೆ ರಿನ್ಯೂವಬಲ್ ಎನರ್ಜಿ ಹಾಗೂ ನಾನ್ ಕನ್‌ವೆನ್‌ಷನಲ್ ಎನರ್ಜಿಯ 25 ಮೆ. ವ್ಯಾ. ಗೂ ಕಡಿಮೆ ಸಾಮರ್ಥ್ಯವುಳ್ಳ ವಿದ್ಯುತ್ ಯೋಜನೆಗಳನ್ನು ಖಾಸಗಿ ಬಂಡವಾಳದಾರರಿಗೆ ವಹಿಸಬೇಕೆಂದು ಹೇಳಿರುವ ಕಾರಣಕ್ಕೆ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.